ಆ) ಇಲ್ಲ. ಭೂಮಿ ಕೇಂದ್ರಗಳನ್ನು ರಾಜ್ಯದ 176 ತಾಲ್ಲೂಕುಗಳು ಹಾಗೂ ಕಂದಾಯ ಇಲಾಖೆಯು 27 ವಿಶೇಷ ತಹಸೀಲ್ದಾರ್‌ಗಳನ್ನು ನೇಮಕ ಮಾಡಿರುವ ಸ್ಥಳಗಳಲ್ಲಿಯೂ ಭೂಮಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲದೆ, ಈ ಯೋಜನೆಯನ್ನು ರಾಜ್ಯದ ಎಲ್ಲಾ ಹೋಬಳಿಗಳಲ್ಲಿಯೂ ಹಂತ ಹಂತವಾಗಿ ಪ್ರಾರಂಭಿಸಿ, ಯೋಜನೆಯ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ವಿಸ್ತರಿಸಲಾಗುವುದು.

ಇ) ಭೂಮಿ ಯೋಜನೆಯನ್ನು ತಾಲ್ಲೂಕು ಮಟ್ಟದಲ್ಲಿ ಮೊದಲು ಪ್ರಾರಂಭಿಸಲಾಗಿತ್ತು. ಎಲ್ಲಾ ತಾಲ್ಲೂಕುಗಳಲ್ಲಿಯೂ ಭೂಮಿ ಯೋಜನೆ ಕಾರ್ಯಗತಗೊಂಡಿರುವುದರಿಂದ, ಈ ಯೋಜನೆ ತಾಲ್ಲೂಕು ಮಟ್ಟದಲ್ಲಿ ವಿಳಂಬವಾಗಿರುವುದಿಲ್ಲ. ಮೇಲೆ ಸೂಚಿಸಿರುವಂತೆ ಈಗ ಈ ಯೋಜನೆಯನ್ನು ಹೋಬಳಿ ಮಟ್ಟದಕ್ಕೆ ವಿಕೇಂದ್ರಿಕರಿಸಲಾಗುತ್ತಿದೆ.

ಈ) ಸರ್ಕಾರವು ಈ ಯೋಜನೆಯನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಹೋಬಳಿ ಮಟ್ಟಕ್ಕೆ ವಿಕೇಂದ್ರೀಕರಿಸಲು ನಿರ್ಧರಿಸಲಾಗಿದ್ದು, ಈ ಯೋಜನೆಯನ್ನು ರಾಜ್ಯದ ಎಲ್ಲಾ ಹೋಬಳಿಗಳಲ್ಲಿಯೂ ಹಂತ ಹಂತವಾಗಿ ಪ್ರಾರಂಭಿಸಿ, ಯೋಜನೆಯ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ರಾಜ್ಯದ ಎಲ್ಲಾ ಹೋಬಳಿಗಳಿಗೂ ವಿಸ್ತರಿಸಲಾಗುವುದು.

1045 (1475) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ವಿಧಾನ ಸಭೆ ಕ್ಷೇತ್ರದಲ್ಲಿ ಇರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಇವುಗಳನ್ನು ಯಾವಾಗ ನಿರ್ಮಿಸಲಾಯಿತು;

ಆ) ಈ ಕೆರೆಗಳನ್ನು ನಿರ್ಮಿಸುವಾಗ ಎಷ್ಟು ಎಕರೆಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಗುರಿ ಹೊಂದಲಾಗಿತ್ತು.

ಇ) ಈಗ ಈ ಕೆರೆಗಳಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯವಾಗುತ್ತಿದೆ: (ಈ ಕೆರೆಗಳನ್ನು ನಿರ್ಮಿಸಲು ತಗುಲಿದ ಅಂದಾಜು ವೆಚ್ಚವೆಷ್ಟು ಎಂಬುದರ ವಿವರಗಳನ್ನು ಕೆರೆವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಈ) ಕೆರೆಗಳನ್ನು ನಿರ್ಮಿಸುವ ಮೊದಲು ಹೊಂದಿದ ನೀರಾವರಿ ಸೌಲಭ್ಯದ ಗುರಿಯನ್ನು ಕೆರೆ ನಿರ್ಮಿಸಿದ ನಂತರ ಮುಟ್ಟಲು ಅಸಾಧ್ಯವಾಗಿರಲು ಕಾರಣವೇನು;

ಉ) ಸದರಿ ಮತಕ್ಷೇತ್ರದಲ್ಲಿ ಎಷ್ಟು ಹೊಸಕೆರೆಗಳನ್ನು ನಿರ್ಮಿಸಲು ಸರ್ವೆ ಮಾಡಲಾಗಿತ್ತು.

ಊ) ಈ ಪೈಕಿ ಯಾವ ಯಾವ ಸ್ಥಳಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲಾಗುವುದು ಇದಕ್ಕೆ ತಗುಲುವ ಅಂದಾಜು ವೆಚ್ಚವೆಷ್ಟು;

ಋ) ಪ್ರಸಕ್ತ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣಗಳನ್ನು ಮೀಸಲಾಗಿರಿಸಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಆ) ಮತ್ತು ಇ) ಅನುಬಂಧ Iರಲ್ಲಿ ನೀಡಲಾಗಿದೆ.

ಈ) 1) ಕೆರೆ ನಿರ್ಮಿಸುವಾಗ ಪರಿಗಣಿಸಲಾಗಿದ್ದ ಮಳೆಯ ಪ್ರಮಾಣಕ್ಕಿಂತ ಕಡಿಮೆ ಮಳೆ ಬೀಳುತ್ತಿರುವುದರಿಂದ ಹಾಗೂ ಬರಪೀಡಿತ ಪ್ರದೇಶವಾಗಿರುವುದರಿಂದ ಕೆರೆಗಳಲ್ಲಿ ನೀರಿನ ಸಂಗ್ರಹಣೆ ಸಾಕಷ್ಟು ಆಗುತ್ತಿಲ್ಲ.

2) ಬಹಳ ಹಳೆಯದಾದ ಕೆರೆಗಳಲ್ಲಿ ಕಾಲುವೆಗಳು ಆಗ ಜಾರಿಯಲ್ಲಿದ್ದ ಪದ್ಧತಿಯಂತೆ ಕೇವಲ ಅಗೆತ ಮಾಡಿರುವ ಸ್ಥಿತಿಯಲ್ಲಿರುತ್ತದೆ (ಲೈನಿಂಗ್ ಇರುವುದಿಲ್ಲ). ಅವುಗಳನ್ನು ಸದ್ಯದ ಮಾದರಿಯಂತೆ (ಲೈನಿಂಗ್) ಮಾರ್ಪಾಡು ಮಾಡಬೇಕಾಗಿದೆ. ಇದರಿಂದ, ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ.

3) ಹಳೆಯ ಕಾಲದಲ್ಲಿ ಸಿ.ಡಿ.ಗಳು ಸಮರ್ಪಕ ಮಟ್ಟದಲ್ಲಿ ಇಲ್ಲ, ಹಾಗೂ, ಕಾಲುವೆಗಳು ಸಂಪೂರ್ಣವಾಗಿ ದುರಸ್ತಿಯಲ್ಲಿದ್ದು, ನೀರಿನ ಹರಿವಿಕೆಗೆ ಅಡೆತಡೆ ಇರುವುದರಿಂದ ಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯುತ್ತಿಲ್ಲ.

4) ಅಚ್ಚುಕಟ್ಟಿನಲ್ಲಿರುವ ಎಲ್ಲಾ ಪ್ರದೇಶಕ್ಕೆ ನೀರು ತಲುಪಿಸಲು ಫೀಲ್ಡ್ ಕಾಲುವೆಗಳನ್ನು ನಿರ್ಮಿಸುವ ಅವಶ್ಯಕತೆ ಇದೆ.

5) ಕೆಂಪು ಬಂಡೆ ತಳಪಾಯ ಇರುವ ಕೆಲವೊಂದು ಕೆರೆಗಳಲ್ಲಿ ನೀರು ಸಂಗ್ರಹಣೆಯಾಗಿದ್ದರೂ ಅಲ್ಪ ಕಾಲದಲ್ಲಿ ಇಂಗಿ ಹೋಗುವುದರಿಂದ ಕಾಲುವೆ ಮೂಲಕ ನೀರಾವರಿಗೆ ನೀರು ಲಭ್ಯವಾಗುತ್ತಿಲ್ಲ. ಆದರೆ ಇಂಗುವ ನೀರಿನಿಂದ ಸುತ್ತಮುತ್ತಲಿನ ಭಾವಿಗಳಲ್ಲಿ ನೀರಿನ ಮಟ್ಟ ಹೆಚ್ಚಾಗಿರುವುದು ಕಂಡುಬರುತ್ತಿದೆ.

ಮೇಲ್ಕಂಡ ಕಾರಣಗಳಿಂದಾಗಿ ನೀರಾವರಿ ಸೌಲಭ್ಯದ ಗುರಿಯನ್ನು ಸಾಧಿಸಲು ಸಾಧ್ಯವಾಗಿಲ್ಲ.

ಉ) ಪ್ರಸ್ತುತ ಹಂತದಲ್ಲಿ 1 ಕಾಮಗಾರಿಗೆ ಪೂರ್ಣ ಪ್ರಮಾಣದ ಸರ್ವೇ ಮಾಡಲಾಗಿದೆ, 8 ಕಾಮಗಾರಿಗಳಿಗೆ ಪೂರ್ವಭಾವಿ ತನಿಖೆ ಹಾಗೂ 3 ಕಾಮಗಾರಿಗಳಿಗೆ ಪೂರ್ವಭಾವಿ ಸರ್ವೇ ಮಾಡಲಾಗಿದೆ.

ಊ) ಪೂರ್ಣ ಪ್ರಮಾಣದ ಸರ್ವೇ ಕಾರ್ಯ ಕೈಗೊಂಡ ನಂತರ ಅವುಗಳ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯನ್ನು ಪರಿಶೀಲಿಸಿ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಋ) 2006–07ನೇ ಸಾಲಿನಲ್ಲಿ ಮೇಲೆ ಹೇಳಲಾದ ಕಾರ್ಯಕ್ಕೆ ಅನುದಾನವನ್ನು ನಿಗಧಿಪಡಿಸಲಾಗಿಲ್ಲ. ಆದರೆ, ಈಗಾಗಲೇ ನಬಾರ್ಡ್‌ನಿಂದ ಸಾಲ ಸೌಲಭ್ಯ ಪಡೆಯಲಾಗಿರುವ 2 ಕಾಮಗಾರಿಗಳಿಗೆ ಆಯವ್ಯಯದಲ್ಲಿ ಅಂದಾಜಿನ ಶೇಕಡ 30ರಂತೆ ರೂ. 8.70 ಲಕ್ಷ ಹಾಗೂ ರೂ. 8.97 ಲಕ್ಷ, ಒಟ್ಟು 17.67 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಅನುಬಂಧ–1

ಕ್ರ.ಸಂ.	ಕೆರೆಯ ಹೆಸರು	ನಿರ್ಮಾಣದ ವರ್ಷ	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ವಿನ್ಯಾಸದ ಅಚ್ಚುಕಟ್ಟು ಎಕರೆಗಳಲ್ಲಿ	ವಾಸ್ತವಿಕ ನೀರಾವರಿ ಪ್ರದೇಶ ಎಕರೆಗಳಲ್ಲಿ
1	ಚಿಕ್ಕನಾಗಾಂವ	1981	4.36	640	45.00 [2005–06]
2	ಬೆಟ್ಟ ಬಾಲಕುಂದಾ ಕೆರೆ	1978	24.82	2618	–
3	ನಾರಾಯಣಪೂರ ಕೆರೆ	1956 ಮುಂಚೆ	5.00	190	–
4	ಹರಕಾಪೂರ ಕೆರೆ	1956 ಮುಂಚೆ	5.00	190	–
5	ಕಲಖೋರಾ ಕೆರೆ	1975	3.25	301	112.00 [2005–06]
6	ತಿಪರಾಂತ ಕೆರೆ	1956 ಮುಂಚೆ	7.00	355	–
7	ಅಟ್ಟುರ ಕೆರೆ	1987	4.93	187	–
8	ಆಲಗೋಡ ಕೆರೆ	1985	61.50	419	–
9	ಹೊನ್ನಳ್ಳಿ ಕೆರೆ	1998	120.00	247	–
10	ಸಿರ್ಗಾಪೂರ ಕೆರೆ	2000	120.00	247	–
11	ಸೈದಾಪೂರ ಕೆರೆ	2006	550.00	642	–

1046 (1528) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಸರಾಸರಿಯಾಗಿ ಪ್ರತಿ ದಿನ ನೋಂದಣಿಯಾಗುವ ದಾಖಲೆಗಳ ಸಂಖ್ಯೆ ಎಷ್ಟು;

ಇ) ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ನೋಂದಣಿ ದಾಖಲೆಗಳನ್ನು ಬೆರಳಚ್ಚು ಮತ್ತು ಸ್ಕ್ಯಾನ್ ಮಾಡುವ ಕೆಲಸಕ್ಕಾಗಿ ಪ್ರತಿಯೊಂದು ಪುಟಕ್ಕೆ ಎಷ್ಟು ಶುಲ್ಕವನ್ನು ಸಾರ್ವಜನಿಕರಿಂದ ವಸೂಲು ಮಾಡಲಾಗುತ್ತಿದೆ;